# ಪಿಂಕಿ ಜಡೆ



■ ಜಿ.ವಿ. ಅರುಣ
ಕಲೆ: ಸಂತೋಷ್ ಸಸಿಹಿತ್ಲು

ಪಿಂಕಿ ತಲೆಗೂದಲಿನ ವಿಚಾರದಲ್ಲಿ ತನ್ನ ವಯಸ್ಸಿನ ಇತರ ಹೆಣ್ಣು ಮಕ್ಕಳಂತಲ್ಲ. ಜಡೆ ಹಾಕುವಷ್ಟು ಅವಳ ಕೂದಲ ಫಸಲು ಬೆಳೆಯುತ್ತಿದ್ದಂತೆ ಅದರ ಕಟಾವು ಕೂಡ ಆಗಿ ಹೋಗುತ್ತಿತ್ತು. ಆಗೆಲ್ಲಾ 'ಅಮ್ಮ ಬಾಯ್ ಕಟ್ ಬೇಡಮ್ಮ. ಹೋಗ್ಲಿ, ಜಡೆ ಬೇಡ; ಟಿಗ್ಗಿ, ಪಿಗ್ಗಿ ಹಾಕಿಕೊಳ್ಳುವಷ್ಟಾದರೂ ಉದ್ದ ಇರಲ್ಲಮ್ಮ. ನಾನೇ ಪ್ರತಿದಿನ ಬಾಚಿಕೊಂಡು ರಬ್ಬರ್ ಬ್ಯಾಂಡ್ ಹಾಕಿಕೊಳ್ತೀನಿ' ಎಂದು ಗೋಗರೆಯುತ್ತಿದ್ದಳು. ತನ್ನ ತಲೆಯ ಹಿಂದೆ ಎರಡು ಪಕ್ಕಗಳಲ್ಲಿ ಕಟ್ಟಿಕೊಳ್ಳುತ್ತಿದ್ದ ಜುಟ್ಟುಗಳಿಗೆ ಪಿಂಕಿ ಮಾಡಿದ್ದ ನಾಮಕರಣ 'ಟಿಗ್ಗಿ, ಪಿಗ್ಗಿ'!

ಪಿಂಕಿಗೆ ಉದ್ದದ ಕೂದಲಿನಲ್ಲಿ ಜಡೆ ಹೆಣೆಸಿಕೊಳ್ಳುವುದು ಎಷ್ಟು ಇಷ್ಟ ಎಂದು ಅವಳ ಅಮ್ಮನಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಶಾಲೆಗೆ ಹೋಗುವಾಗ ಪ್ರತಿದಿನ ಜಡೆ ಹೆಣೆಯುವಷ್ಟು ಸಮಯ, ಅದೂ ಬೆಳಿಗ್ಗೆ ಏಳುತ್ತಿದ್ದ ಹಾಗೆ ಎಲ್ಲಿರುತ್ತದೆ?. ಹಾಗಾಗಿ ಪಿಂಕಿಯ ಕೂದಲನ್ನು ಕತ್ತರಿಸಲು ಕರೆದುಕೊಂಡು ಹೋದಾಗಲೆಲ್ಲ ಅವಳ ಕರುಳು ಚುರುಕ್ ಎನ್ನುತ್ತಿತ್ತು. ಆದರೆ ವಿಧಿಯಿರಲಿಲ್ಲ.

ಪಿಂಕಿಯ ತಾಯಿ ಆನ್‌ಲೈನ್ ಆರ್ಡರ್ ಮಾಡುವುದಕ್ಕಿಂತ ಅಂಗಡಿಗಳಿಗೆ ಕರೆದುಕೊಂಡು ಹೋಗಿ, ಕೊಳ್ಳುವ ವಸ್ತುಗಳ ಬೆಲೆ, ಚೌಕಾಸಿ ಮಾಡುವ ಕಲೆ, ಇವನ್ನು ಮಗಳಿಗೆ ಕಲಿಸಲು ಪ್ರಯತ್ನಪಡುತ್ತಿದ್ದಳು. 'ಅಮ್ಮ, ಹೋದ ಸಲಿ ಟೊಮ್ಯಾಟೊ ಕೆ.ಜಿ.ಗೆ ಐದು ರೂಪಾಯಿ ಇತ್ತು. ಇವತ್ತು ತುಂಬಾ ಜಾಸ್ತಿ ಹೇಳ್ತಿದ್ದಾರೆ' ಎಂದು ಒಮ್ಮೆ ಪಿಂಕಿ ಹೇಳಿದ್ದಳು. ಅದನ್ನು ಕೇಳಿ ತಾಯಿಗೆ ತನ್ನ ಮಗಳು ಯಾವುದಕ್ಕೆ ಎಷ್ಟು ಬೆಲೆ ಎಂಬ ಲೋಕಜ್ಞಾನವನ್ನು ಈಗಲೇ ಪಡೆಯುತ್ತಿದ್ದಾಳೆ. ಹಾಗಾಗಿ ಅವಳು ಐಎಎಸ್ ಪರೀಕ್ಷೆಯಲ್ಲಿ ಖಂಡಿತವಾಗಿ ತೇರ್ಗಡೆ ಹೊಂದುತ್ತಾಳೆ ಎಂದು ಆನಂದಪಟ್ಟಿದ್ದಳು.

ಶನಿವಾರ ಸಾಯಂಕಾಲ ಕೈಯಲ್ಲಿ ಚೀಲವನ್ನು ಹಿಡಿದು ಅಮ್ಮನೊಡನೆ ಮಾರುಕಟ್ಟೆಗೆ ಹೋಗುವುದು ಪಿಂಕಿಗೆ ಎರಡು ಕಾರಣಗಳಿಗೆ ಬಹಳ ಇಷ್ಟವಾಗುತ್ತಿತ್ತು. ಮೊದಲನೆಯದು ಅವಳ ಟಿಗ್ಗಿ, ಪಿಗ್ಗಿಗಳಿಗೆ ಚೋಟುದ್ದ ಮಲ್ಲಿಗೆಯ ಮಾಲೆಯನ್ನು ಕೊಂಡು ಮುಡಿಯುವುದು; ಎರಡನೆಯದು ವ್ಯಾಪಾರವೆಲ್ಲ ಆದ ಮೇಲೆ ಅಮ್ಮ ಕೊಡಿಸುತ್ತಿದ್ದ ಕೋನ್ ಐಸ್‌ಕ್ರೀಮ್.

ಪಿಂಕಿ ಮಲಗುವ ಮುನ್ನ ತನ್ನ ಜುಟ್ಟಿನಿಂದ ಮಲ್ಲಿಗೆಯ ಮಾಲೆಯನ್ನು ಜಾಗ್ರತೆಯಿಂದ ತೆಗೆದಿರಿಸುತ್ತಿದ್ದಳು. ಅಮ್ಮನ ಮಾರ್ಗದರ್ಶನದಲ್ಲಿ ಹೂವನ್ನು ಜೋಪಾನ ಮಾಡುವ ಕಲೆಯು ಪಿಂಕಿಗೆ ಕರಗತವಾಗಿತ್ತು. ಅಮ್ಮನ ಕರವಸ್ತ್ರವನ್ನು ಒದ್ದೆಮಾಡಿ, ಹೂವನ್ನು ಅದರಲ್ಲಿ ಸುತ್ತಿಡುತ್ತಿದ್ದಳು. ಆಗ ಹೂವಿನ ಮಾಲೆಯನ್ನು ನೋಡಿ ಪಿಂಕಿಯು ಆಡುವ ಆನಂದದ ಮಾತುಗಳನ್ನು ಕೇಳಬೇಕು. 'ಅಮ್ಮ ಅಚ್ಚ ಬಿಳಿಹೂವು' ಎಂತಲೋ, 'ಅಮ್ಮ ಇವತ್ತು ಮಲ್ಲಿಗೆ ಜೊತೆ ಮರುಗಾನು ಹಾಕಿ

